ಗ್ರಾಮಾಂತರ ಪ್ರದೇಶದಲ್ಲಿರುವ ವೈದ್ಯಾಧಿಕಾರಿಗಳಿಗೆ ವಸತಿ ಸೌಲಭ್ಯಗಳು,

೭೫೭. ಶ್ರೀ ಪಿ.ಬಿ ಓಂಕಾರ ಮೂರ್ತಿ.— ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಆರೋಗ್ಯ ಹಾಗೂ ಅಬ್ಕಾರಿ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ?

೧) ಗ್ರಾಮಾಂತರ ಪ್ರದೇಶದಲ್ಲಿ ವಸತಿ ಸೌಕರ್ಯದ ಅಭಾವವಿರುವುದರಿಂದ ವೈದ್ಯಾಧಿಕಾರಿಗಳು ಗ್ರಾಮಾಂತರ ಪ್ರದೇಶಕ್ಕೆ ಹೋಗಲು ನಿರಾಕರಿಸುತ್ತಿರುವುದು ನಿಜವೇ ?

೨) ಹಾಗಿಲ್ಲದಿದ್ದಲ್ಲಿ ಗ್ರಾಮಾಂತರ ಪ್ರದೇಶದ ಆಸ್ಪತ್ರೆಗಳ ಕೆಲಸ ಮಾಡುವ ವೈದ್ಯಾಧಿಕಾರಿಗಳಿಗೆ ವಸತಿ ಸೌಕರ್ಯಗಳನ್ನು ಹೆಂಡ್ಕೊ ಯೋಜನೆಯಲ್ಲಿ ಒದಗಿಸಿಕೊಡುವ ಯೋಜನೆ ಸರ್ಕಾರದವರ ಗಮನದಲ್ಲಿದೆಯೇ?

೩) ಹಾಗಿದ್ದಲ್ಲಿ ೧೯೮೬-೮೮ ರಲ್ಲಿ ವಸತಿ ಸೌಕರ್ಯವನ್ನು ಒದಗಿಸಿ ಕೊಡಲಾಗುವುದೆ?

ಶ್ರೀ ಹೆಚ್. ಟಿ. ಕೃಷ್ಣಪ್ಪ (ಆರೋಗ್ಯ ಮಂತ್ರಿ ಮತ್ತು ಅಬ್ಕಾರಿ ಸಚಿವರು).—

೧) ಅನೇಕ ಕಾರಣಗಳಲ್ಲಿ ಇದೂ ಒಂದಾಗಿದೆ.

೨) ಇದೆ.

೩) ೧೯೮೭-೮೮ರಿಂದ ಹಂತಹಂತವಾಗಿ ವಸತಿ ಸೌಕರ್ಯವನ್ನು ಒದಗಿಸುವ ವಿಚಾರವು ಸರ್ಕಾರಕ್ಕೆ ಇದೆ.

ಶ್ರೀ ಪಿ.ಬಿ. ಓಂಕಾರಮೂರ್ತಿ.—ನಮ್ಮ ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲ್ಲೂಕಿನ ಬಹಳಷ್ಟು ಆಸ್ಪತ್ರೆಗಳಲ್ಲಿ ವಸತಿಸೌಕರ್ಯ ಇರುವುದಿಲ್ಲ ಇವುಗಳಿಗೆ ಪ್ರಾಶಸ್ತ್ಯ ಕೊಟ್ಟು ವಸತಿ ಒದಗಿಸಿ ಕೊಡಂತ್ತಿರಾ ?

ಶ್ರೀ ಹೆಚ್.ಟಿ.ಕೃಷ್ಣಪ್ಪ.—ಸ್ವಾಮಿ ರಾಜ್ಯಾದ್ಯಂತ ಈ ಸಮಸ್ಯೆ ಇದೆ. ಬರೀ ಕಡೂರು ತಾಲ್ಲೂಕಿಗೆ ಇದಂ ಸೀಮಿತವಾದದ್ದಲ್ಲಿ. ಈಗ ಹುಡ್ಕೋ ನೆರವಿನ ಮೂಲಕ ಎಲ್ಲಾ ಭಾಗಗಳಿಗೂ ಕೂಡ ವಸತಿ ಸೌಕರ್ಯ ಒದಗಿಸುವ ಯೋಜನೆಯನ್ನು ಹಂತಹಂತವಾಗಿ ಕೈಗೆತ್ತಿಕೊಳ್ಳಲಾಗುವುದು, ಆ ಸಂದರ್ಭದಲ್ಲಿ ನಿಮ್ಮ ಕಡೂರಿಗೂ ಆ ಸೌಲಭ್ಯ ದೊರೆಯಬುತ್ತದೆ.

ಅಧ್ಯಕ್ಷರು.—ಶ್ರೀ ಡಿ.ಜಿ. ಬಸವನಗೌಡ ಅವರ ಶಂಗಿನೇ ಪ್ರಶ್ನೆ, ಮಾನ್ಯ ಸದಸ್ಯರು ಗೈರು ಹಾಜರಿ.

ಚಿತ್ರಾಪುರ ತಾಲ್ಲೂಕಿನಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರವನ್ನಾಗಿ ಪರಿವರ್ತಿಸುವುದು

೭೫೭. ಶ್ರೀ ವಿಶ್ವನಾಥ್ ಪಾಟೀಲ ಹೆಬ್ಬಾಳ (ಚಿತ್ರಾಪುರ).—ಮಾನ್ಯ ಆರೋಗ್ಯ ಹಾಗೂ ಅಬಕಾರಿ ಮಂತ್ರಿಗಳು ಈ ಕಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಚಿತ್ರಾಪುರ ತಾಲ್ಲೂಕಿನಲ್ಲಿ ಎಷ್ಟು ಆರೋಗ್ಯ ಘಟಕಗಳಿವೆ ? ಅವುಗಳಲ್ಲಿ ಎಷ್ಟು ಪ್ರಾಥಮಿಕ ಆರೋಗ್ಯಘಟಕಗಳು ತನ್ನದೇ ಆದ ಕಟ್ಟಡ ಹೊಂದಿವೆ?

ಆ) ಚಿತ್ರಾಪುರ ತಾಲ್ಲೂಕಿನ ದಂಡೂತಿ, ವೇಟ ಶ್ರೀರೂರು, ಗುಂಡಗುರ್ತಿ ಹಾಗೂ ಗುಲ್ಬರ್ಗ ತಾಲ್ಲೂಕಿನ ಹರಸೂರು ಗ್ರಾಮ ಪ್ರಾಥಮಿಕ ಆರೋಗ್ಯ ಘಟಕಗಳಿಗೆ ಗ್ರಾಮಸ್ಥರು ೨.೫೦೦ ರೂ ಹಾಗೂ ೪ ಎಕರೆ ಭೂಮಿಯನ್ನು ಕೊಟ್ಟಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ, ಈ ಪ್ರಾಥಮಿಕ ಆರೋಗ್ಯ ಘಟಕಗಳ ಕಟ್ಟಡವನ್ನು ಕಟ್ಟಲು ಈ ವರ್ಷ ಪ್ರಾರಂಭಿಸಲಾಗುವುದೆ?

ಈ) ಗ್ರಾಮಸ್ಥರು ಜಾಗ ಹಾಗೂ ಭೂಮಿಯನ್ನು ಕೊಟ್ಟ ಮೇಲೆ ಎಷ್ಟು ದಿನಗಳಲ್ಲಿ ಕಟ್ಟಡದ ಕೆಲಸ ಪ್ರಾರಂಭಿಸಬೇಕು ಎನ್ನುವುದರ ಬಗೆಗೆ ಕಾರ್ಯನೀತಿ ಇದೆಯೇ?

ಉ) ಚಿತ್ರಾಪುರ ಆಸ್ಪತೆಯ ಮಹಿಳಾ ವೈದ್ಯಾಧಿಕಾರಿಗಳ ಸ್ಥಳ ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಎಷ್ಟು ದಿವಸಗಳಿಂದ ಖಾಲಿ ಇದೆ? ಇದನ್ನು ಯಾವಾಗ ತುಂಬಲಾಗುವುದು?

ಶ್ರೀ ಹೆಚ್. ಟಿ. ಕೃಷ್ಣಪ್ಪ(ಆರೋಗ್ಯ ಮಂತ್ರಿ ಕುಟುಂಬ ಕಲ್ಯಾಣ ಸಚಿವರು).—

ಅ) ಹೌ

ಅ) ಬಂದಿದೆ.

ಇ) ದಂಡೂತಿ ಗ್ರಾಮಕ್ಕೆ ಸಾರ್ವಜನಿಕರು ತಮ್ಮ ಸ್ವಂತ ಖರ್ಚಿನಿಂದ ಆಸ್ಪತ್ರೆ ಕಟ್ಟಡ ಕಟ್ಟಿಸಿ ಕೊಡಬೇಕೆಂಬ ಷರತ್ತಿಗೆ ಬದ್ಧವಾಗಿ ಪ್ರಾಥಮಿಕ ಆರೋಗ್ಯ ಘಟಕವನ್ನು ಮಂಜೂರು ಮಾಡಲಾಗಿದೆ. ಸ್ಥಳೀಯರು ಈ ಷರತ್ತನ್ನು ಪೂರೈಸಿರುವುದಿಲ್ಲ.

ಪೇಟಶೀರೂರು, ಗುಂಡಗುರ್ತಿ ಹಾಗೂ ಹರಸೂರು ಗ್ರಾಮಗಳಲ್ಲಿ ಪ್ರಾಥಮಿಕ ಆರೋಗ್ಯ ಘಟಕಗಳ ಕಟ್ಟಡ ನಿರ್ಮಾಣಕ್ಕೆ ಲೋಕೋಪಯೋಗಿ ಇಲಾಖೆಯಿಂದ ನಕ್ಷೆ ಮತ್ತು ಅಂದಾಜು ಪಟ್ಟಿ ಬಂದ ನಂತರ ಸರ್ಕಾರದ ಭಾಗದ ಹಣ ಒದಗಿಸಲು ಆಯವ್ಯಯದ ಅನುಕೂಲತೆಗಳನ್ನು ಗಮನಿಸಿ ಮಂಜೂರಾತಿ ನೀಡಲಾಗುವುದು.

ಈ) ಇಷ್ಟೇ ದಿನಗಳಲ್ಲಿ ಕಟ್ಟಡ ಕಟ್ಟಿಸಬೇಕೆಂಬ ನಿರ್ದಿಷ್ಟ ಕಾಲಮಿತಿ ಇರುವುದಿಲ್ಲ.

ಉ) ಬಂದಿದೆ. ದಿನಾಂಕ ೫–೮–೧೯೮೫ ರಿಂದ ಖಾಲಿ ಇದೆ.

ದಿನಾಂಕ ೨೨–೧–೮೭ ರಲ್ಲಿ ಈ ಆಸ್ಪತ್ರೆಗೆ ಒಬ್ಬ ಮಹಿಳಾ ವೈದ್ಯರನ್ನು ನೇಮಕ ಮಾಡಲಾಗಿದೆ.

ಶ್ರೀ ವಿಶ್ವನಾಥ ಪಾಟೀಲ್ ಹೆಬ್ಬಾಳ .—ಚಿತ್ರಾಪುರ ತಾಲ್ಲೂಕಿನಲ್ಲಿ ಪ್ರಾಥಮಿಕ ಆರೋಗ್ಯ ಘಟಕ ಕೇಂದ್ರವನ್ನು ಕಟ್ಟಲು ಪೂರ್ತಿ ಹಣವನ್ನು ಗ್ರಾಮಸ್ಥರೇ ಭರಿಸಿ ದಂಡೂತಿಯಲ್ಲಿ ಆಸ್ಪತ್ರೆ ಕಟ್ಟಿಸಿ ಕೊಳ್ಳಬೇಕೆಂದು ಹೇಳುತ್ತಿದ್ದೀರಿ. ಹಾಗಿದ್ದರೆ ಸದರಿ ಗ್ರಾಮಸ್ಥರಿಂದ ೨೫,೦೦೦ ರೂಪಾಯಿಗಳ ವಂತಿಗೆಯನ್ನು ಏಕೆ ಸರ್ಕಾರ ಡಿಪಾಜಿಟ್ ಮಾಡಿಸಿಕೊಂಡಿತು?

ಶ್ರೀ ಹೆಚ್.ಟಿ. ಕೃಷ್ಣಪ್ಪ.—ಮೊದಲು ಅವರು ಆ ರೀತಿ ಮುಚ್ಚಳಿಕೆ ಬರೆದುಕೊಟ್ಟಿದ್ದರು. ಆನಂತರ ಅವರ ನಿಲುವನ್ನು ಬದಲಾಯಿಸಿಕೊಂಡು ಬೇರೆ ಆಸ್ಪತ್ರೆಗಳಿಗೆ ಕೊಟ್ಟಿರುವ ಸವಲತ್ತನ್ನೇ ನಮಗೂ ಒದಗಿಸಿಕೊಡಿ ಎಂದು ಕೇಳಿದ ಮೇಲೆ ೨೫,೦೦೦ ತೆಗೆದುಕೊಂಡಿದ್ದುದು. ಈಗ ಬೇರೆ ಆಸ್ಪತ್ರೆಗಳಿಗೆ ಕೊಡುವ ಸೌಲಭ್ಯವನ್ನೇ ಇವರಿಗೂ ಅನ್ವಯಿಸುವ ಆಲೋಚನೆ ಇದೆ.

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ.—ಇದೊಂದೇ ಕಡೆ ಈ ತರಹ ಆಗಿಲ್ಲ ಅನೇಕ ಕಡೆ ೨೫,೦೦೦ ಡಿಪಾಜಿಟನ್ನು ನಮ್ಮ ಸರ್ಕಾರ ತೆಗೆದುಕೊಂಡಿದ್ದರೂ ಇದುವರೆಗೂ ಕೆಲಸವನ್ನು ಕೈಗೆತ್ತಿಕೊಂಡಿಲ್ಲ. ನಮ್ಮ ಕ್ಷೇತ್ರಗಳಾದ ಚಿತ್ರಾಪುರ, ಅಫಜಲಪುರಗಳಲ್ಲೂ ಈ ತರಹವೇ ಆಗಿದೆ. ಇದನ್ನು ಪರಿಹರಿಸುವುದಕ್ಕೆ ಸರ್ಕಾರ ಯಾವ ಕಾರ್ಯಕ್ರಮ ಹಾಕಿಕೊಂಡಿದೆ? ೧೦–೧೨ ವರ್ಷಗಳಿಂದ ಪೋಸ್ಟ್ ಆಫೀಸಿನ ಡಿಪಾಜಿಟ್ ನಲ್ಲಿ ಈ ಹಣ ಇದೆ.

ಶ್ರೀ ಹೆಚ್.ಟಿ ಕೃಷ್ಣಪ್ಪ.—ನೀವು ಹೇಳುತ್ತಿರುವುದು ನಿಜ. ಈ ವಿಷಯದ ತೀವ್ರತೆಯನ್ನು ಸರ್ಕಾರ ಸಹಾನುಭೂತಿಯಿಂದ ಪರಿಶೀಲಿಸುತ್ತದೆ.

ಚಿಕ್ಕಮಗಳೂರು ತಾಲ್ಲೂಕಿನಲ್ಲಿ ಸಾರಿಗೆ ಸೌಲಭ್ಯ

೨೮೮. ಶ್ರೀ ಐ. ಬಿ. ಶಂಕರ್ (ಚಿಕ್ಕಮಗಳೂರು).—ಮಾನ್ಯ ಸಾರಿಗೆ, ಸಣ್ಣ ಉಳಿತಾಯ ಮತ್ತು ಬಂದೀಖಾನೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ,

(ಅ) ಚಿಕ್ಕಮಗಳೂರು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಡಿಪೋದಲ್ಲಿ ಖಾಲಿ ಇರುವ ವಾಹನ ಚಾಲಕರ ಹುದ್ದೆಗಳು ಎಷ್ಟು ಹಾಗೂ ಅವುಗಳನ್ನು ತ್ವರಿತವಾಗಿ ಭರ್ತಿ ಮಾಡಲಾಗುವುದೇ ;

(ಆ) ಚಿಕ್ಕಮಗಳೂರು ತಾಲ್ಲೂಕಿನಲ್ಲಿ ಸಾರಿಗೆ ವ್ಯವಸ್ಥೆ ಸಮರ್ಪಕವಾಗಿಲ್ಲದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ? ಹಾಗಿದ್ದಲ್ಲಿ ಇದರ ಬಗ್ಗೆ ಕೈಗೊಂಡ ಕ್ರಮವೇನು ;

(ಇ) ಚಿಕ್ಕಮಗಳೂರಿನಿಂದ ಉಡುಪಿಗೆ ನೇರ ಬಸ್ ವ್ಯವಸ್ಥೆಯ ಬಗ್ಗೆ ಭರವಸೆ ನೀಡಿದ್ದರೂ ಈವರೆವಿಗೂ ಕಾರ್ಯಾರಂಭವಾಗದಿರಲು ಕಾರಣವೇನು ?